**ಪತ್ರಿಕಾ ಪ್ರಕಟಣೆ**

**ವಿಜಯಪುರ**
**ದಿನಾಂಕ: 09.09.2021.**

**1] ಝಳಕಿ ಪೊಲೀಸ ಠಾಣೆ ಗುನ್ನೆ ನಂ: 88/2021 ಕಲಂ: 279, 337, 338, 304(ಎ) ಐಪಿಸಿ .**

ದಿನಾಂಕ 07.09.2021 ರಂದು 19.45 ಗಂಟೆಗೆ, ಸುಮಾರಿಗೆ ಇದರಲ್ಲಿಯ ಮೃತ ಆರೋಪಿ ಅನೀಲ ಬೀರಪ್ಪಾ ಪೂಜಾರಿ ವಯಾ 18 ವರ್ಷ ಜ್ಯಾತಿ ಹಿಂದೂ ಕುರುಬರ ಉದ್ಯೋಗ ಕೂಲಿ ಕೆಲಸ ಸಾ: ಇಂಡಿ ರೇಲ್ವೆ ಶ್ಟೇಷನ್ ತಾಲೂಕ ಇಂಡಿ. ಮೋಟಾರ ಸೈಕಲ ನಂಬರ ಕೆ,ಎ:24 ಜೆ :410. ನೇದ್ದರ ಚಾಲಕ ಈತನು ತಾನು ನಡೆಸುತ್ತಿದ್ದ ಮೋಟಾರ ಸೈಕಲ ನೇದ್ದರ ಮೇಲೆ ತನ್ನ ಹಿಂದುಗಡೆ ದು:ಖಾಪತಿಯಾದ ಮಂಜುನಾಥ ತಂದೆ ದೇವೇಂದ್ರ ನಾಮದಾರ ವಯಾ 18 ವರ್ಷ ಸಾ: ತೆನಳ್ಳಿ ಈತನಿಗೆ ಕುಡ್ರಿಸಿಕೊಂಡು ಹೋರ್ತಿ ಕಡೆಯಿಂದಾ ಝಳಕಿ ಕಡೆಗೆ ಅತೀ ಜೋರದಿಂದಾ ನಡೆಯಿಸಿಕೊಂಡು ಬಂದು ಕೂಡಗಿ ಕ್ರಾಸದ ಸಮೀಪ ಹೊಸದಾಗಿ ಮಾಡಿದ ಹಾಜೀ ಪೆಟ್ರೋಲ ಬಂಕದ ಹತ್ತಿರ ಬ್ರಿಜ್ಜದ ಎನ್,ಎಚ್,–13 ರಸ್ತೆಯ ಮೇಲೆ ಕೆಲಸ ನಡೆದಿದ್ದು ರಸ್ತೆಯ ಮೇಲೆ ಅಡ್ಡವಾಗಿ ಬ್ಯಾರಲದಲ್ಲಿ ಮತ್ತು ರಸ್ತೆಯ ಮೇಲೆ ಮಣ್ಣು ಹಾಕಿದ್ದು ಬ್ಯಾರಲಕ್ಕೆ ಅದಕ್ಕೆ ಹಾಯಿಸಿ ಅಪಘಾತ ಪಡಿಸಿ ಮೋಟಾರ ಸೈಕಲದ ಹಿಂದುಗಡೆ ಕುಳಿತ ಮಂಜುನಾಥ ದೇವೇಂದ್ರಪ್ಪಾ ನಾಮದಾರ ಸಾ: ತೆನಳ್ಳಿ ತಾಲೂಕ ಇಂಡಿ ಈತನಿಗೆ ಸಾಧಾ ಮತ್ತು ಭಾರಿ ದು:ಖಾಪತ ಪಡಿಸಿದ್ದಲ್ಲದೇ ಮೋಟಾರ ಸೈಕಲನ್ನು ನಡೆಸುತ್ತಿದ್ದ ಆರೋಪಿತನಾದ ಅನೀಲ ತಂದೆ ಬೀರಪ್ಪಾ ಪೂಜಾರಿ ವಯಾ 18 ವರ್ಷ ಸಾ: ಇಂಡಿ ರೇಲ್ವೆ ಶ್ಟೇಷನ್ ತಾಲೂಕ ಇಂಡಿ ಈತನು ಸ್ಥಳದಲ್ಲಿಯೇ ಮೃತ ಆಗಿದ್ದು ಇರುತ್ತದೆ. ಈ ಬಗ್ಗೆ ಬೀರಪ್ಪಾ ವಿಠ್ಠಲ ಪೂಜಾರಿ ಸಾ: ಇಂಡಿ ರೇಲ್ವೇ ಶ್ಠೇಷನ ತಾಲೂಕ ಇಂಡಿ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 08.09.2021 ರಂದು ಝಳಕಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಬ.ಬಾಗೇವಾಡಿ ಪೊಲೀಸ ಠಾಣೆ ಗುನ್ನಾ. ನಂ: 160/2021 ಕಲಂ: 279,304(ಎ) ಐಪಿಸಿ.**

ದಿನಾಂಕ: 07.09.2021 ರಂದು 19:00 ಗಂಟೆ ಸುಮಾರಿಗೆ, ಇದರಲ್ಲಿ ಆರೋಪಿತನಾದ ಮೃತ: ಅಜೀತ ಬಸಲಿಂಗಪ್ಪ ಹಿಟ್ನಳ್ಳಿ ವಯಾ 30 ವರ್ಷ ಸಾ: ಬಸವನಹಟ್ಟಿ. ತಾ: ಬಸವನಬಾಗೇವಾಡಿ. ಈತನು ತನ್ನ ಹಿರೋ ಹೊಂಡಾ ಸ್ಪೇಂಡರ ಮೋಟಾರ ಸೈಕಲ್ ನಂ: ಕೆಎ:29 ಆರ್:8219 ನೇದ್ದನ್ನು ಬಸವನಬಾಗೇವಾಡಿ ಕಡೆಯಿಂದ ಬಸವನಹಟ್ಟಿ ಕಡೆಗೆ ಬರುವ ಸಲುವಾಗಿ ಬಹಳ ಜೋರಾಗಿ ಮತ್ತು ನಿರ್ಲಕ್ಷತನದಿಂದ ನಡೆಯಿಸಿ, ಬಸವನಬಾಗೇವಾಡಿ ಸಮೀಪವಿರುವ ಗಂಗಪ್ಪ ಮದರಿ ಇವರ ಜಮೀನದ ಹತ್ತಿರ ರಸ್ತೆಯ ಮೇಲೆ ಒಮ್ಮೆಲೆ ರಸ್ತೆಯ ಮೇಲೆ ಮೋಟಾರ ಸೈಕಲ್ ಸ್ಕಿಡ ಮಾಡಿ ಕೆಡವಿ, ಮೋಟಾರ ಸೈಕಲ್ ಮೇಲಿಂದ ಕೆಳಗೆ ಬಿದ್ದು, ಅಪಘಾತಪಡಿಸಿ ತನ್ನ ತಲೆಗೆ ಭಾರಿ ಪೆಟ್ಟುಗಾಯಗೊಂಡಿದ್ದು. ಸದರಿಯವನಿಗೆ ಉಪಚಾರಕ್ಕಾಗಿ ಬಾಗೇವಾಡಿ ಸರ್ಕಾರಿ ತಂದು ಅಲ್ಲಿಂದ ಹೆಚ್ಚಿನ ಉಪಚಾರಕ್ಕಾಗಿ ವಿಜಯಪುರದ ಸಂಜೀವಿನ ಆಸ್ಪತ್ರೆಯಲ್ಲಿ ದಾಖಲು ಮಾಡಿದಾಗ ಅಲ್ಲಿ ಉಪಚಾರ ಫಲಕಾರಿಯಾಗದೆ ದಿನಾಂಕ: 08.09.2021 ರಂದು 13:20 ಗಂಟೆಗೆ ತೀರಿಕೊಂಡಿರುತ್ತಾನೆ. ಈ ಬಗ್ಗೆ ಶ್ರೀಮತಿ. ಮಂಜುಳಾ ಅಜೀತ ಹಿಟ್ನಳ್ಳಿ. ಸಾ: ಶಿರಗುಪ್ಪಿ ತಾಲೂಕ: ಜಮಖಂಡಿ.ಹಾಲಿ: ಬಸವನಹಟ್ಟಿ ತಾಲೂಕ: ಬಸವನಬಾಗೇವಾಡಿ. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 08.09.2021 ರಂದು ಬ.ಬಾಗೇವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ದೇವರ ಹಿಪ್ಪರಗಿ ಪೊಲೀಸ ಠಾಣೆ ಗುನ್ನಾ ನಂ: 145/2021 ಕಲಂ: 78(3) ಕೆ.ಪಿ.ಆ್ಯಕ್ಟ**

ದಿನಾಂಕ: 07.09.2021 ರಂದು 16.00 ಗಂಟೆಗೆ ಇದರಲ್ಲಿಯ ಆರೋಪಿತನಾದ ವಿಠ್ಠಲ ಚಂದ್ರಶೇಖರ ಕೋಳಿ, ಸಾ: ಕೊಂಡಗುಳಿ ಗ್ರಾಮ, ತಾ: ದೇವರ ಹಿಪ್ಪರಗಿ ಈತನು ಕೊಂಡಗುಳಿ ಗ್ರಾಮದ ಬಸ್ ನಿಲ್ದಾಣದ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ತನ್ನ ಫಾಯಿದೆಗೋಸ್ಕರ ಹೋಗಿ ಬರುವ ಜನರಿಗೆ ಕರೆದು ಅವರಿಗೆ ಒಂದು ರೂಪಾಯಿಗೆ 80 ರೂಪಾಯಿ ಕೊಡುವ ಕರಾರಿನ ಮೇಲೆ ಸಾರ್ವಜನಿಕರಿಂದ ಹಣ ಪಡೆದುಕೊಂಡು ಓ.ಸಿ ಅಂಕಿ ಸಂಖ್ಯೆಗಳನ್ನು ಬರೆದುಕೊಂಡು ಬಾಂಬೆ ವ ಕಲ್ಯಾಣ ಎನ್ನುವ ಓ.ಸಿ ಮಟಕಾ ಜೂಜಾಟ ಆಡುತ್ತಿದ್ದಾಗ ಸಿಕ್ಕಿದ್ದು ಅದೆ. ಈ ಬಗ್ಗೆ ಶ್ರೀಮತಿ ಎಸ್.ಬಿ.ನಡುವಿನಕೇರಿ ಮ.ಪಿ.ಎಸ್.ಐ ದೇವರ ಹಿಪ್ಪರಗಿ ಪೊಲೀಸ್ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 08.09.2021 ರಂದು ದೇವರ ಹಿಪ್ಪರಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.